UASB
LIBRARY
Newspaper Clippings
Pg .1 Wednesday 22-12-2021 Jai Kisan



ರಾಜ್ಯದ 14.42 ಲಕ್ಷ ಸಂತ್ರಸ್ತ ರೈತರಿಗೆ ಹೆಚ್ಚುವರಿ ಪರಿಹಾರ | ಸರ್ಕಾರದ ಬೊಕ್ಕಸಕ್ಕೆ 1,200 ಕೋಟಿ ರೂ. ಅಧಿಕ ಹೊರೆ

ಪ್ರಕೃತಿ ವಿಕೋಪದಿಂದಾದ ಬೆಳೆ ನಷ್ಟಕ್ಕೆ ಪರಿಹಾರ ಹೆಚ್ಚಳ

ಮೊದಲನೇ ಪುಟದಿಂದ...

ಒಟ್ಟು 12.69 ಲಕ್ಷ ಹೆಕ್ಟೇರ್ ಬೆಳೆ ನಷ್ಟ ಅನುಭವಿಸಿದ 14.42 ಲಕ್ಷ ಸಂತ್ರಸ್ತ ರೈತರಿಗೆ ಹೆಚ್ಚುವರಿ ಪರಿಹಾರ ಅನ್ವಯಿಸಲಿದೆ. ಈಗಾಗಲೇ ಪರಿಹಾರ ಪಾವತಿಯಾದ ರೈತರ ಬ್ಯಾಂಕ್ ಖಾತೆಗೂ ಹೆಚ್ಚುವರಿ ಪರಿಹಾರಧನ ಜಮೆ ಮಾಡಲಾಗುವುದು ಎಂದರು. ರೈತರ ಪರವಿರುವ ಸರ್ಕಾರ ಸದಾ ಅವರ ಕಷ್ಟ-ನಷ್ಟಗಳಿಗೆ ಸ್ಪಂದಿಸುತ್ತಿದೆ. ಹೆಚ್ಚುವರಿ ನೆರವಿನಿಂದ ರಾಜ್ಯದ ಬೊಕ್ಕಸಕ್ಕೆ 1,200 ಕೋಟಿ ರೂ. ಅಧಿಕ ಹೊರೆ ಬೀಳಲಿದೆ. ಕರೋನಾದಿಂದಾಗಿ ಆರ್ಥಿಕತೆ ಸರಿದಾರಿಗೆ ಬರದಿದ್ದರೂ ನೊಂದ ರೈತರ ಕಣ್ಣೀರೊರೆಸಲು ಬದ್ಧವೆಂದು ಸಿಎಂ ಬೊಮ್ಮಾಯಿ ಸಾರಿದರು. ವಿದ್ಯಾನಿಧಿ ಯೋಜನೆಗೆ 1,000 ಕೋಟಿ ರೂ. ಕಾದಿರಿಸಲಾಗಿದೆ ಎಂದು ಸರ್ಕಾರ ಹೇಳಿದರೂ ಈವರೆಗೆ 40 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ಮಾಜಿ ಸಿಎಂ, ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ಪ್ರಸ್ತಾಪಿಸಿದಾಗ ಈವರೆಗೆ 2.40 ಲಕ್ಷ ಪಿಯು ವಿದ್ಯಾರ್ಥಿಗಳಿಗೆ ಶಿಷ್ಯವೇತನ ಬಿಡುಗಡೆಯಾಗಿದ್ದು, ಉಳಿದ ವಿದ್ಯಾರ್ಥಿಗಳಿಗೂ ನೆರವು ಸಿಗಲಿದೆ ಎಂದು ಬೊಮ್ಮಾಯಿ ಪ್ರತಿಕ್ರಿಯಿಸಿದರು. ಕಳೆದ ವರ್ಷ ಪ್ರಕೃತಿ ವಿಕೋಪದಿಂದ ಹಾನಿಗೀಡಾದ ಎ ಮತ್ತು ಬಿ ಕೆಟಗರಿಯ 36,698 ಮನೆಗಳ ನಿರ್ಮಾಣ ಪೂರ್ಣಗೊಂಡಿದ್ದು, ವಿವಿಧ ಕಾರಣಗಳಿಗಾಗಿ 3,130 ಮನೆಗಳ ನಿರ್ಮಾಣ ಇನ್ನೂ ಪ್ರಾರಂಭವಾಗಿಲ್ಲ. ಉಳಿದ ಮನೆಗಳ ನಿರ್ಮಾಣ ಕಾಮಗಾರಿ ವಿವಿಧ ಹಂತದಲ್ಲಿವೆ ಎಂದು ಸಿಎಂ ತಿಳಿಸಿದರು.

ಸಮರ್ಪಕ ನಿರ್ವಹಣೆ: ಜುಲೈನಿಂದ ನವೆಂಬರ್‌ನಲ್ಲಿ ಉಂಟಾದ ಅತಿವೃಷ್ಟಿ, ಪ್ರವಾಹ ತಂದೊಡ್ಡಿದ ಸಂಕಷ್ಟ ಪರಿಸ್ಥಿತಿಯನ್ನು ಸರ್ಕಾರ ಸಮರ್ಪಕವಾಗಿ ನಿರ್ವಹಿಸಿದೆ. ಒಟ್ಟು 62 ಜನರು ಮೃತಪಟ್ಟಿದ್ದು, 795 ಜಾನುವಾರು ಬಲಿಯಾಗಿವೆ, ಬೆಳೆ ನಷ್ಟ ಅನುಭವಿಸಿದವರ ಖೈಕಿ 12.52 ಲಕ್ಷ ರೈತರ ಬ್ಯಾಂಕ್ ಖಾತೆಗೆ ಒಂದು ತಿಂಗಳಲ್ಲಿ 926.43 ಕೋಟಿ ರೂ. ಪರಿಹಾರ ಜಮೆ ಮಾಡಲಾಗಿದೆ. ಬಿದ್ದ 54,716 ಮನೆಗಳಿಗೆ 332.90 ಕೋಟಿ ರೂ. ಅನುದಾನವನ್ನು ಆಯಾ ಜಿಲ್ಲಾಧಿಕಾರಿಗೆ ಬಿಡುಗಡೆ ಮಾಡಿದ್ದು, ಈ ಖೈಕಿ 23,872 ಮನೆಗಳಿಗೆ 172 ಕೋಟಿ ರೂ. ಪರಿಹಾರ ಪಾವತಿಯಾಗಿದೆ. 45,000 ಕಿ.ಮೀ. ಉದ್ದದ ರಸ್ತೆ, 3,306 ಸೇತುವೆಗಳು, 3,000ಕ್ಕೂ ಹೆಚ್ಚು ಕೆರೆಗಳು ಹಾನಿಗೆ ಒಳಗಾಗಿವೆ ಎಂದು ಕಂದಾಯ ಸಚಿವ ಆರ್. ಅಶೋಕ್ ವಿವರಿಸಿದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಅಧಿಕಾರಾವಧಿಯಲ್ಲಿ ಅನಾವೃಷ್ಟಿಗೆ ಪರಿಹಾರ ಕೋರಿ ಕೇಂದ್ರಕ್ಕೆ ಪತ್ರ ಬರೆಯಲು ಮೂರು ತಿಂಗಳು ತೆಗೆದುಕೊಂಡರು. ಎಂಟು ತಿಂಗಳ ಬಳಿಕ ಪರಿಹಾರ ವಿತರಿಸಿದ್ದು, ಅವರ ಕಾಲದಲ್ಲೇ ರೈತರ ಆತ್ಮಹತ್ಯೆಗಳು ಹೆಚ್ಚಾದವು ಎಂದು ಆರ್.ಅಶೋಕ್ ಟೀಕಿಸಿದರು.



ಬೆಳಗಾವಿ ಸಂತ್ರಸ್ತರ ಕಣ್ಣೀರಿಗೆ ಕೊನೆ

ಪ್ರವಾಹದಿಂದ ಕಷ್ಟ-ನಷ್ಟ ಅನುಭವಿಸಿ, 2019-20ರಿಂದಲೂ ಪರಿಹಾರದಿಂದ ವಂಚಿತರಾದ ಬೆಳಗಾವಿ ಜಿಲ್ಲೆಯ ಮನೆ ಕಳೆದುಕೊಂಡ 7,600 ಸಂತ್ರಸ್ತರು ತಾಂತ್ರಿಕ ಕಾರಣಗಳಿಂದ ಸರ್ಕಾರದ ದಾಖಲೆಯಲ್ಲಿ ಸೇರದ ಕಾರಣವನ್ನು ಮರು ಪರಿಶೀಲಿಸಿ ಅರ್ಹ ಅಷ್ಟೂ ಸಂತ್ರಸ್ತರಿಗೆ ಮನೆ ಪರಿಹಾರ ಮೊತ್ತ ಪಾವತಿಗೆ ಆದೇಶಿಸಿದ್ದು, ಅನುದಾನ ಬಿಡುಗಡೆ ಮಾಡಿದೆ. ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಈ ವಿಷಯದತ್ತ ಗಮನಸೆಳೆದಾಗ ಸಿಎಂ ಬೊಮ್ಮಾಯಿ ಉತ್ತರಿಸಿ, ಯಾವುದೇ ಅರ್ಹ ಸಂತ್ರಸ್ತರಿಗೆ ಅನ್ಯಾಯವಾಗಲು ಬಿಡುವುದಿಲ್ಲ ಎಂದರು.



ಪೂರ್ತಿ ಮನೆ ಕಳೆದುಕೊಂಡ ಸಂತ್ರಸ್ತರಿಗೆ ನೀಡಿದ ನೆರವು ಸದ್ಬಳಕೆ ಉದ್ದೇಶದಿಂದ ಹಂತ ಹಂತವಾಗಿ ಪರಿಹಾರ ಬಿಡುಗಡೆ ಮಾಡಲಾಗಿತ್ತು. ನೆರವು ಪಡೆಯಲು ಮುಂದೆ ಬಾರದ ಸಂತ್ರಸ್ತರ ಬಗ್ಗೆ ಡಿ.ಸಿ.ಗಳಿಂದ ವರದಿ ತರಿಸಿಕೊಂಡು ಉಳಿದ ಕಂತಿನ ಹಣವನ್ನು ಸರ್ಕಾರ ಬಿಡುಗಡೆ ಮಾಡಲಿ.

| ಬಿ.ಎಸ್.ಯಡಿಯೂರಪ್ಪ ಮಾಜಿ ಸಿಎಂ



ಪೂರ್ತಿ ಮನೆ ಕಳೆದುಕೊಂಡ ಸಂತ್ರಸ್ತರಿಗೆ ಸರ್ಕಾರ ಐದು ಲಕ್ಷ ರೂ. ನೆರವು ಘೋಷಿಸಿದೆ. 2019-20ನೇ ಸಾಲಿನ ಸಂತ್ರಸ್ತರು ಮೊದಲ ಅಥವಾ ಎರಡನೇ ಕಂತಿನ ಪರಿಹಾರ ಸ್ವೀಕರಿಸಲು ಮುಂದೆ ಬಂದಿಲ್ಲ. ಹಿಂದಿನ ಸಿಎಂ ಬಿಎಸ್ ವೈ, ನಾನು ಪತ್ರ ಬರೆದು ವಿನಂತಿಸಿದರೂ ಸ್ಪಂದಿಸುತ್ತಿಲ್ಲ

| ಆರ್.ಅಶೋಕ್ ಕಂದಾಯ ಸಚಿವ

ಸಂಸ್ಕರಿತ ತಾಳೆ ಎಣ್ಣೆ ಸುಂಕ ಇಳಿಕೆ

22-12-2021
Vv Pg 04

ನವದೆಹಲಿ: ಅಡುಗೆ ತೈಲಗಳ ಬೆಲೆ ಏರಿಕೆ ತಡೆಯುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ, ಸಂಸ್ಕರಿತ ತಾಳೆ ಎಣ್ಣೆಯ ಆಮದು ಸುಂಕ ಇಳಿಕೆ ಮಾಡಿದೆ. ತಾಳೆ ಎಣ್ಣೆಯ ಮೂಲ ಸೀಮಾ ಸುಂಕವನ್ನು ಶೇಕಡ 17.5ರಿಂದ ಶೇಕಡ 12.5ಕ್ಕೆ ಇಳಿಸಿದೆ. ಇದು ಮುಂದಿನ ಮಾರ್ಚ್ ತನಕ ಚಾಲ್ತಿಯಲ್ಲಿ ಇರಲಿದೆ. ಪ್ರಾದೇಶಿಕ ಬೆಲ್ಲರೆ ಮಾರುಕಟ್ಟೆಯಲ್ಲಿ ದರ ಇಳಿಸುವುದಕ್ಕೆ ಸರ್ಕಾರದ ಈ ಕ್ರಮ ನೆರವಾಗಲಿದೆ. ಇದರೊಂದಿಗೆ ತಾಳೆ ಎಣ್ಣೆ ಮತ್ತು ಪಾಲೋಲಿನ್‌ನ ಮೂಲ ಸೀಮಾ ಸುಂಕ (ಬಿಸಿಡಿ), ಎಲ್ಲ ತೆರಿಗೆಗಳು ಶೇ.19.25ರಿಂದ ಶೇ.13.75ಕ್ಕೆ ಇಳಿಯಲಿದೆ. ಮಂಗಳವಾರದಿಂದಲೇ ಚಾಲ್ತಿಗೆ ಬಂದಿದೆ.

ಷೇರುಪೇಟೆ ಚೇತರಿಕೆ: ಸೋಮವಾರ ಭಾರಿ ಕುಸಿತ ಕಂಡಿದ್ದ ಷೇರುಪೇಟೆ ಮಂಗಳವಾರ ಚೇತರಿಕೆ ತೋರಿದೆ. ಬಿಎಸ್‌ಇ ಸೆನ್ಸೆಕ್ಸ್ 497 ಅಂಶ ಏರಿ 56,319.01 ಅಂಶದಲ್ಲಿ, ಎನ್ ಎಸ್‌ಇ ನಿಫ್ಟಿ 156.65 ಅಂಶ ಏರಿ 16,770.85 ಅಂಶದಲ್ಲಿ ವಹಿವಾಟು ಮುಗಿಸಿವೆ.

ಚಿನ್ನ ಇಳಿಕೆ, ಬೆಳ್ಳಿ ಏರಿಕೆ: ದೆಹಲಿಯ ಚಿನಿವಾರ ಪೇಟೆಯಲ್ಲಿ ಚಿನ್ನದ ದರ 10ಗ್ರಾಮಿಗೆ 172 ರೂ. ಇಳಿದು, 47,246 ರೂ. ಆಗಿದೆ. ಬೆಳ್ಳಿಯ ದರ 342 ರೂ. 60,508 ರೂ. ಆಗಿದೆ.

ರೂಪಾಯಿ ಅಪಮೌಲ್ಯ

ಅಂತಾರಾಷ್ಟ್ರೀಯ ಕರೆನ್ಸಿ ಮಾರುಕಟ್ಟೆಯಲ್ಲಿ ಭಾರತದ ರೂಪಾಯಿ ವಾರ್ಷಿಕ ಲೆಕ್ಕಾಚಾರದಲ್ಲಿ ಕಳಪೆ ಪ್ರದರ್ಶನ ತೋರಿದೆ. ಈ ತ್ರೈಮಾಸಿಕದಲ್ಲಿ ಭಾರತದ ಷೇರುಪೇಟೆಯಿಂದ ವಿದೇಶಿ ಸಂಸ್ಥೆಗಳು 400 ಕೋಟಿ ಡಾಲರ್ ಬಂಡವಾಳ ಹಿಂಪಡೆದ ಕಾರಣ ಭಾರತದ ರೂಪಾಯಿ ಮೌಲ್ಯ ಶೇಕಡ 2.2 ಕುಸಿದಿದೆ. ಸತತ 4ನೇ ವರ್ಷವಾದ ಈ ವರ್ಷವೂ ರೂ. ಮೌಲ್ಯ ಶೇ.4 ಕುಸಿತ ಕಾಣುವ ಸಾಧ್ಯತೆ ಇದೆ ಎಂದು ಅಂತಾರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳ ಡೇಟಾ ಹೇಳಿದೆ. ಆದಾಗ್ಯೂ, ಮಂಗಳವಾರದ ವಹಿವಾಟಿನಲ್ಲಿ ಡಾಲರ್ ಎದುರು ರೂ. ಮೌಲ್ಯ 31 ಪೈಸೆ ಏರಿದ್ದು, 75.59 ರೂ.ಗೆ ಸ್ಥಿರವಾಗಿದೆ.



22-12-2021
Vv Pg 08

For more information visit
University Library Website
Web - uasbagrilibindia.org
E-mail- librarian@uasbangalore.edu.in

ಕೃಷಿ, ರೈತರ ಸಮಸ್ಯೆಗೆ ಪತಂಜಲಿ ಪರಿಹಾರ



■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರೈತರು ಮತ್ತು ಕೃಷಿ ಸಂಬಂಧಿತ ಸಮಸ್ಯೆಗಳ ಪರಿಹಾರಕ್ಕಾಗಿ ಪತಂಜಲಿ ಸಂಶೋಧನಾ ಸಂಸ್ಥೆ ಸುಮಾರು 150 ವಿಜ್ಞಾನಿಗಳ ನೆರವಿನಿಂದ 'ನವ್ ಹರಿತ್ ಕ್ರಾಂತಿ-ಆನ್ ಅಗ್ರೋ ವಿಷನ್' ಪುಸ್ತಕ ಸಿದ್ಧಪಡಿಸಿದೆ ಎಂದು ಪತಂಜಲಿ ಯೋಗಪೀಠ ಟ್ರಸ್ಟ್ ಸಂಸ್ಥಾಪಕ, ಖ್ಯಾತ ಯೋಗಗುರು ಬಾಬಾ ರಾಮದೇವ್ ತಿಳಿಸಿದ್ದಾರೆ.

ಕೃಷಿ ಸಮಸ್ಯೆಗಳನ್ನು ಪರಿಹರಿಸುವ, ಕೃಷಿಯನ್ನು ಸರಳಗೊಳಿಸುವ ಮತ್ತು ರೈತರ ಆದಾಯ ಹೆಚ್ಚಿಸುವ ಭವಿಷ್ಯದ ಯೋಜನೆಗಳ ಕುರಿತು ಹರಿದ್ವಾರದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದರು. ಪತಂಜಲಿ ಸಂಸ್ಥೆ ರೈತರ ಸ್ಥಿತಿ ಉನ್ನತೀಕರಿಸಲು ಭವಿಷ್ಯದ ಯೋಜನೆ ಹೊಂದಿದೆ. ಸಾವಯವ ಕೃಷಿ ತರಬೇತಿಯಿಂದ ಆರಂಭಿಸಿ ಸಾವಯವ ಗೊಬ್ಬರ, ಗುಣಮಟ್ಟದ ಬೀಜಗಳು ಮತ್ತು ಕನಿಷ್ಠ ಬೆಲೆಯ ರಸಗೊಬ್ಬರ ತಲುಪಿಸುತ್ತದೆ. ಈಗ ತಾಂತ್ರಿಕ ಕ್ಷೇತ್ರದಲ್ಲಿಯೂ ಪತಂಜಲಿ ರೈತರಿಗೆ ಸಹಾಯ ಮಾಡಲು ಆ್ಯಪ್ ರೂಪದಲ್ಲಿ ತಾಂತ್ರಿಕ ಮಧ್ಯಸ್ಥಿಕೆಗಳನ್ನು ಅಭಿವೃದ್ಧಿಪಡಿಸಿದೆ. ಭೂಮಿಯ ಜಿಯೋ-ಮ್ಯಾಪಿಂಗ್, ಜಿಯೋ-ಫೆನ್ಸಿಂಗ್ ಮತ್ತು ಹವಾಮಾನ ಮುನ್ಸೂಚನೆ ಮೌಲ್ಯಮಾಪನ ಮಾಡಿ ರೈತರಿಗೆ ಮಾಹಿತಿ ನೀಡಲು ಮುಂದಾಗಿದೆ ಎಂದರು.

» 'ನವ್ ಹರಿತ್ ಕ್ರಾಂತಿ-ಆನ್ ಅಗ್ರೋ ವಿಷನ್' ಪುಸ್ತಕ ಸಿದ್ಧ

» ಬಾಬಾ ರಾಮದೇವ್ ಮಾಹಿತಿ

ಆಚಾರ್ಯ ಬಾಲಕೃಷ್ಣ ಮಾತನಾಡಿ, ರೈತರು ಮತ್ತು ಸರ್ಕಾರದ ನಡುವಿನ ಅಂತರವನ್ನು ಕಡಿಮೆ ಮಾಡಲು ಪತಂಜಲಿ ಕೆಲಸ ಮಾಡುತ್ತಿದೆ. ನವಹರಿತ್-ಕ್ರಾಂತಿ ಆನ್ ಅಗ್ರೋ-ವಿಷನ್ ಜಾರಿಗೆ ತಂದರೆ ರೈತರಿಗೆ ಹೆಚ್ಚಿನ ಪ್ರಯೋಜನ ಸಿಗುತ್ತದೆ. ಪ್ರಧಾನಮಂತ್ರಿಗಳ ಮಣ್ಣುಪರೀಕ್ಷೆಯ ಗುರಿ, ಕೃಷಿ ಡಿಜಿಟಲೀಕರಣ ಮತ್ತು ಪಿಎಂ-ಕಿಸಾನ್ ಯೋಜನೆ ಜಾರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಪತಂಜಲಿ ಬಿಡುಗಡೆ ಮಾಡುತ್ತಿರುವ ಪುಸ್ತಕ ಸಮಗ್ರ ವಿಶ್ವಕೋಶದಂತಿದ್ದು, ಕೃಷಿಯ ಪ್ರಸ್ತುತ ಸ್ಥಿತಿ, ಅದಕ್ಕೆ ಸಂಬಂಧಿಸಿದ ಸಮಸ್ಯೆಗಳು, ತಾಂತ್ರಿಕ ಪರಿಹಾರಗಳನ್ನು ಒಳಗೊಂಡಿದೆ. ಕೃಷಿ ಸಂಬಂಧಿತ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಮೂಲಸೌಕರ್ಯ ಸೃಷ್ಟಿಸಿದೆ. ಇದನ್ನು ಭೂದಾಖಲೆಗಳ ಇಲಾಖೆ ಮತ್ತು ಕೃಷಿ ಇಲಾಖೆಯಲ್ಲಿ ಬಳಸಲು ಆಯಾ ಸಚಿವಾಲಯಗಳಿಗೆ ತಿಳಿಸುವುದಾಗಿ ನೀತಿ ಆಯೋಗದ ಸದಸ್ಯ ಪ್ರೊ.ರಮೇಶ್ ಚಂದ್ ಹೇಳಿದರು. ಮುಂದಿನ ದಿನಗಳಲ್ಲಿ ಕೃಷಿಯಲ್ಲಿ ವೈಜ್ಞಾನಿಕ ಕ್ರಾಂತಿ ಆಗಲಿದ್ದು, ತಂತ್ರಜ್ಞಾನವು ಅಪಾರ ಕೊಡುಗೆ ನೀಡಲಿದೆ ಎಂದರು. ಭಾರತೀಯ ಕೃಷಿ ಸಂಶೋಧನಾ ಮಂಡಳಿ ಪ್ರಧಾನ ಕಾರ್ಯದರ್ಶಿ ಡಾ.ತ್ರಿಲೋಚನ್ ಮಹಾಪಾತ್ರ, ಜಿಬಿ ಪಂತ್ ಕೃಷಿ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಕುಲಪತಿ ಡಾ.ತೇಜ್ ಪ್ರತಾಪ್, ಕೃಷಿನೀತಿ ತಜ್ಞ ದೇವಿಂದರ್ ಶರ್ಮಾ, ಕವೀಂದರ್ ಸಿಂಗ್, ಡಾ.ವೇದಪ್ರಿಯಾ ಆರ್ಯ ಮತ್ತಿತರರು ಉಪಸ್ಥಿತರಿದ್ದರು.



ವಿಶ್ವ ರೈತ ದಿನಾಚರಣೆ

ಕೋಲಾರ: ಕರ್ನಾಟಕ ರಾಜ್ಯ ರೈತ ಸಂಘ ಕೆ.ಎಸ್ ಪುಟ್ಟಣ್ಣಯ್ಯ ಬಣದ ಜಿಲ್ಲಾಧ್ಯಕ್ಷ ಮರಗಲ್ ಶ್ರೀನಿವಾಸ್ ನೇತೃತ್ವದಲ್ಲಿ ಎಲ್ಲಾ ತಾಲೂಕು ಅಧ್ಯಕ್ಷರುಗಳ ಸಭೆಯನ್ನು ನಗರದ ಪ್ರವಾಸ ಮಂದಿರದಲ್ಲಿ ಕರೆದು ವಿಶ್ವ ರೈತ ದಿನಾಚರಣೆ ಆಚರಿಸಲು ನಿರ್ಧರಿಸಲಾಯಿತು.

ಇದೇ ತಿಂಗಳು 22 ರಂದು ಬುಧವಾರ ವಿಶ್ವ ರೈತ ದಿನಾಚರಣೆ ಮತ್ತು ಸಂಘಟನೆಯ ನಾಯಕ ಕೆ.ಎಸ್ ಪುಟ್ಟಣ್ಣಯ್ಯ ವರ ಜನ್ಮ ದಿನವನ್ನು ಆಚರಿಸಿ ರಾಗಿ, ಭತ್ತ, ತರಕಾರಿ ಪೂಜೆ ಮಾಡಿ ಬಡವರಿಗೆ ಹಂಚುವ ಮತ್ತು ಮಾದರಿ ರೈತರಿಗೆ ಸನ್ಮಾನ ಪುರಸ್ಕಾರ ಹಾಗೂ ನೂರಾರು ಕಾರ್ಯಕರ್ತರಿಂದ ನೇತ್ರದಾನ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮವನ್ನು ಬುಧವಾರದಂದು ಬೆಳಗ್ಗೆ 11-30 ಪತ್ರಕರ್ತರ ಭವನದಲ್ಲಿ ಆಯೋಜಿಸಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಜಿಲ್ಲಾ ಉಪಾಧ್ಯಕ್ಷ ಪಾರೂಕ್‌ಪಾಷ, ಜಿಲ್ಲಾ ಸಲ್ಪಸಂಖ್ಯಾತ ಅಧ್ಯಕ್ಷ ಬೃಹಾನುದ್ದೀನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮರಗಲ್ ವೆಂಕಟೇಶ್, ಕೋಲಾರ ತಾಲೂಕುಅಧ್ಯಕ್ಷ ಕೆಂಬೋಡಿ ರವಿ, ಮುಳಬಾಗಿಲು ತಾಲೂಕು ಅಧ್ಯಕ್ಷ ಬಂಗಾರಿ ಮಂಜುನಾಥ್, ಬಂಗಾರಪೇಟೆ ಅಧ್ಯಕ್ಷ ಐತಾಂಡಹಳ್ಳಿ ಅಂಬರೀಶ್, ಕೆ.ಜ.ಎಫ್ ತಾಲೂಕು ಯೂಸೂಪ್ ಖಾನ್, ಮುಜಾಮಿಲ್, ಮಾಲೂರು ತಾಲೂಕು ಮುಖಂಡರಾದ ಎಂ.ಹೊಸಹಳ್ಳಿ ವೆಂಕಟೇಶ್, ಕುಡಿಯನೂರು ರವಿ, ಪಾಲೇಶ್‌ಗೌಡ, ಮಹಿಳಾ ಅಧ್ಯಕ್ಷರುಗಳಾದ ಮಾಗೊಂದಿ ರತ್ನಮ್ಮ, ಸುನಂದಮ್ಮ, ಶ್ರೀನಿವಾಸಪುರ ತಾಲೂಕು ಮುಖಂಡರಾದ ತರ್ನಹಳ್ಳಿ ಲೋಕೇಶ್, ಮುಜಾಮಿಲ್, ಕೃಷ್ಣಪ್ಪ ಇದ್ದರು.

22-12-2021 Hd Pg 08

22-12-2021 Vv Pg 01

ಸಾವಿರ ರೂ. ಗಡಿ ದಾಟಿದ ರೇಷ್ಮೆ ಬೆಲೆ

■ ವಿಕ ಸುದ್ದಿಲೋಕ ರಾಮನಗರ

ಚೀನಾ ರೇಷ್ಮೆ ಆಮದು ಸ್ಥಗಿತಗೊಂಡಿರುವುದು ಮಾತ್ರವಲ್ಲದೇ, ಇಳುವರಿ ಕಡಿಮೆಯಾಗಿರುವ ಕಾರಣಕ್ಕೆ ರೇಷ್ಮೆಗೆ ಬಂಪರ್ ಬೆಲೆ ಬಂದಿದೆ. ಪ್ರತಿ ಕೆಜಿ ಮಿಶ್ರತಳಿ ಬೆಲೆ ಗರಿಷ್ಟ 800 ರೂ. ದಾಟಿದರೆ, ಬಯೋಲ್ಟನ್ 1,000 ರೂ.ಗಳ ವರೆಗು ಮಾರಾಟವಾಗುತ್ತಿದೆ. ಆದರೆ, ಉತ್ಪಾದನೆ ಕಡಿಮೆ ಆಗಿರುವುದರಿಂದ ರೈತರಿಗೆ ಹೆಚ್ಚೇನೂ ಪ್ರಯೋಜನವಾಗುತ್ತಿಲ್ಲ.

ಇಡೀ ರಾಜ್ಯದಲ್ಲಿ ಅಂದಾಜು 1 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪು ನೇರಳೆ ಸೊಪ್ಪು ಬೆಳೆಯಲಾಗುತ್ತಿದೆ. ಕಳೆದೊಂದು ತಿಂಗಳಿನಿಂದ ರೇಷ್ಮೆ ದರ ದಿನದಿಂದ ದಿನಕ್ಕೆ ಏರುತ್ತಲೇ ಇದೆ. ಅದರಲ್ಲೂ ಚಳಿಗಾಲ ಶುರುವಾದ ಬಳಿಕ ಈ ದರ ಇನ್ನಷ್ಟು ಹೆಚ್ಚಾಗುತ್ತಿರುವುದು ಬೆಳೆಗಾರರ ಮುಖದಲ್ಲಿ ಮಂದ ಹಾಸವನ್ನು ಮೂಡಿಸಿದೆ. ಆದರೆ, ಉತ್ಪಾದನೆ ಪ್ರಮಾಣವೇ ಇಳಿಕೆಯಾಗಿರುವುದು ಆತಂಕಕ್ಕೂ ಕಾರಣವಾಗಿದೆ.

ದರ ಏರಿಕೆಯಾಗಲು ಕಾರಣಗಳೇನು?

ತಿಂಗಳ ಹಿಂದೆ ಪ್ರತಿ ಕೆಜಿ ಮಿಶ್ರತಳಿ ಬೆಲೆ ಗರಿಷ್ಟ 400ರಿಂದ 500 ರೂ.ಗಳಿತ್ತು. ಈಗ 800 ರೂ.ವರೆಗು ಮಾರಾಟಗೊಳ್ಳುತ್ತಿದ್ದು, ಬಯೋಲ್ಟನ್ (ಬಿಳಿಗೂಡು) ಸಹ 600 ರಿಂದ 1 ಸಾವಿರಕ್ಕೆ ಏರಿಕೆಯಾಗಿದೆ. ನಮ್ಮ ದೇಶಕ್ಕೆ ಸರಾಸರಿ 45 ಸಾವಿರ ಮೆಟ್ರಿಕ್‌ಟನ್ ನಷ್ಟು ರೇಷ್ಮೆ ಅವಶ್ಯಕತೆ ಇದೆ. ಆದರೆ, ನಮ್ಮಲ್ಲಿ 33 ಸಾವಿರ ಮೆಟ್ರಿಕ್ ಟನ್ ನಷ್ಟೆ ಉತ್ಪಾದನೆಯಾಗುತ್ತಿದೆ. ಹೀಗಾಗಿ ಚೀನಾದಿಂದ ಅಂದಾಜು 10 ಸಾವಿರ ಮೆಟ್ರಿಕ್ ಟನ್ ಆಮದು ಮಾಡಿಕೊಳ್ಳಲಾಗುತ್ತಿತ್ತು. ಕೋವಿಡ್‌ನಿಂದಾಗಿ ಈ ಆಮದು ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಇತ್ತೀಚೆಗೆ 5 ಸಾವಿರ ಮೆಟ್ರಿಕ್ ಟನ್ ಆಮದು ಮಾಡಿಕೊಂಡಿರುವುದನ್ನು ಬಿಟ್ಟರೆ, ಚೀನಾ ಆವಲಂಬನೆ ಸದ್ಯಕ್ಕೆ ನಿಲ್ಲಿಸಲಾಗಿದೆ. ಹೀಗಾಗಿ ರೇಷ್ಮೆಗೆ ಬೇಡಿಕೆ ಹೆಚ್ಚಾಗಿದೆ.

ಇದರೊಂದಿಗೆ ಚಳಿಗಾಲದಲ್ಲಿ ರೇಷ್ಮೆಗೆ ಸುಣ್ಣಪುಟ್ಟು ರೋಗ ಹೆಚ್ಚಾಗಿದ್ದು ಇಳುವರಿಯು ಕುಸಿತಗೊಂಡಿದೆ. ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ರೇಷ್ಮೆ ಗೂಡಿನ ಬೆಲೆ ಪಾತಾಳಕ್ಕೆ ಕುಸಿದಿತ್ತು.

22-12-2021 Vk Pg 07

1500 ಎಕರೆ ಪ್ರದೇಶದಲ್ಲಿ ಸಾವಯವ ಕೃಷಿ | 850 ಟನ್ ಭತ್ತ ಬೆಳೆ

ಕೇದಾರ ಕಜೆ ಕುಚ್ಚಲಕ್ಕಿ ಬಿಡುಗಡೆ

◆ ದಿಗಂತ ವರದಿ, ಸುವರ್ಣಸೌಧ



ಕೇದಾರ ಉತ್ಥಾನ ಟ್ರಸ್ಟ್‌ನಿಂದ ಉಡುಪಿ ವಿಧಾನಸಭಾ ಕ್ಷೇತ್ರದ 1,500 ಎಕರೆ ಪ್ರದೇಶದಲ್ಲಿ ಸಾವಯವ ಕೃಷಿಯಡಿಯಲ್ಲಿ ಉಡುಪಿ ಕೇದಾರ ಕಜೆ ಕುಚ್ಚಲಕ್ಕಿಯನ್ನು ಬೆಳೆಯಲಾಗಿದೆ. ಗುರುವಾರ ಸಂಜೆ 7 ಗಂಟೆಗೆ ಬೆಳಗಾವಿಯ ಖಾಸಗಿ ಹೋಟೆಲ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಕ್ಕಿಯನ್ನು ಬಿಡುಗಡೆಗೊಳಿಸಲಿದ್ದಾರೆ ಎಂದು ಶಾಸಕ ರಘುಪತಿ ಭಟ್ ಹೇಳಿದರು.



ಮಂಗಳವಾರ ಸುವರ್ಣಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಫೆಬ್ರುವರಿ ತಿಂಗಳಲ್ಲಿ 55 ಜನಪ್ರತಿನಿಧಿಗಳು ಸೇರಿ ಕೇದಾರ ಉತ್ಥಾನ ಟ್ರಸ್ಟ್ ಆರಂಭಿಸಿ ಪಾಳು ಬಿದ್ದ 1,500 ಎಕರೆ ಭೂಮಿಯನ್ನು ರೈತರಿಂದ ವರ್ಷದ ಮಟ್ಟಿಗೆ ಪಡೆದು ಸಾವಯವ ಕೃಷಿ ಕೈಗೊಳ್ಳಲಾಗಿದೆ. ಇದರಲ್ಲಿ ಸುಮಾರು 850 ಟನ್ ಭತ್ತ ಬೆಳೆಯಲಾಗಿದೆ. ಗುರುವಾರ ಸಿಎಂ ಬೊಮ್ಮಾಯಿ ಅವರು ಈ ಹೊಸ ಮಾದರಿಯ ಕುಚ್ಚಲಕ್ಕಿಯ ಬಿಡುಗಡೆ ಹಾಗೂ ಆನ್‌ಲೈನ್ ಮಾರಾಟಕ್ಕೆ ಚಾಲನೆ ನೀಡಲಿದ್ದಾರೆ ಎಂದರು. ➘9

ಕೇದಾರೋತ್ಥಾನ ರೈತ ಉತ್ಪಾದಕರ ಕಂಪನಿಯಿಂದ ಭತ್ತ ಖರೀದಿ ◆ಪುಟ 9

ಕುಚ್ಚಲಕ್ಕಿಯಲ್ಲಿದೆ ಪೌಷ್ಟಿಕಾಂಶ

ಕೇದಾರ ಉತ್ಥಾನ ಟ್ರಸ್ಟ್‌ನಿಂದ ಉಡುಪಿ ವಿಧಾನಸಭಾ ಕ್ಷೇತ್ರದ 35 ವಾರ್ಡ್, 19 ಗ್ರಾಪಂಗಳ 3800 ರೈತರಿಂದ 1,500 ಎಕರೆಯನ್ನು 1 ವರ್ಷಕ್ಕಾಗಿ ಪಡೆದು ಪಾಳು ಬಿದ್ದ ಭೂಮಿ ಹದಗೊಳಿಸಲಾಯಿತು: ಪ್ರತಿ ಗ್ರಾಪಂಗೆ ಒಬ್ಬರನ್ನು ನೇಮಿಸಿ ಸಾವಯವ ಕೃಷಿ ಮಾಡಲಾಗಿದೆ. ಈ ಭೂಮಿಯಲ್ಲಿ 850 ಟನ್ ಬೆಳೆ ಬೆಳೆಯಲಾಗಿದ್ದು, ಇನ್ನು ಕೆಲ ಎಕರೆ ಕೊಯ್ಲು ಇದೆ. ಒಟ್ಟಾರೆ 1 ಸಾವಿರ ಟನ್ ಬೆಳೆ ಬಂದಿದ್ದು, ರಸಗೊಬ್ಬರದಿಂದ ಬೆಳೆದ ಬೆಳೆಯ ಇಳುವರಿಗಿಂತ ಶೇ.40 ಉತ್ಪಾದನೆ ಕಡಿಮೆ ಆಗಿದೆ. ಆದರೆ, ಈ ಅಕ್ಕಿಯಲ್ಲಿ ಹೆಚ್ಚಿನ ಪೌಷ್ಟಿಕಾಂಶಗಳಿದ್ದು, ಆರೋಗ್ಯಕ್ಕೆ ಅತ್ಯುತ್ತಮ ಎಂದು ರಘುಪತಿ ಭಟ್ ವಿವರಿಸಿದರು.

22-12-2021 Hd Pg 01

ರೈತರ ಖಾತೆಗೆ 926.43 ಕೋಟಿ ರೂ.ಜಮಾ

ಸುವರ್ಣವಿಧಾನಸೌಧ: ಅತಿವೃಷ್ಟಿಯಿಂದ ಉಂಟಾಗಿದ್ದ ಬೆಳೆ ಹಾನಿಗೆ ಸಂಬಂಧಿಸಿ ಕೇಂದ್ರ ಸರಕಾರಕ್ಕೆ ತ್ವರಿತವಾಗಿ ಪ್ರಸ್ತಾವನೆ ಸಲ್ಲಿಸಿ, ಒಂದೇ ತಿಂಗಳಲ್ಲಿ 14 ಲಕ್ಷ ರೈತರ ಖಾತೆಗಳಿಗೆ ಸರಕಾರ 926.43 ಕೋಟಿ ರೂ.ಪರಿಹಾರ ಜಮಾ ಮಾಡಿದೆ ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ಅತಿವೃಷ್ಟಿ ಬೆಳೆಹಾನಿ ಮೇಲೆ ನಡೆದ ಚರ್ಚೆಗೆ ವಿಧಾನಸಭೆಯಲ್ಲಿ ಮಂಗಳವಾರ ಅವರು ಉತ್ತರಿಸಿದರು. ಬಿಜೆಪಿ ಸರಕಾರದಿಂದ ಒಂದೇ ಒಂದು ಪೈಸೆ ಪರಿಹಾರ ನೀಡಿಲ್ಲವೆಂದ ಪ್ರತಿಪಕ್ಷ ನಾಯಕರ ಹೇಳಿಕೆಗೆ, ನಾನೂ ಕೂಡ ಪೈಸೆಯೂ ನೀಡಿಲ್ಲ ಎಂದಿದ್ದೆ ಯಾಕೆಂದರೆ, ನಾವು ಕೋಟ್ಯಂತರ ರೂ. ಗಳನ್ನು ಸಂಕಷ್ಟದಲ್ಲಿರುವ ರೈತರು, ಸಂತ್ರಸ್ತರಿಗೆ ಶರವೇಗದಲ್ಲಿ ನೀಡುವ ಮೂಲಕ ನೆರವಿಗೆ ಧಾವಿಸಿದ್ದೇವೆ ಎಂದರು. ಅತಿವೃಷ್ಟಿಯಿಂದ 12.52 ಲಕ್ಷ ಹೆಕ್ಟೇರ್ ಜಮೀನಿನಲ್ಲಿ ಬೆಳೆ ಹಾನಿ ಸಂಭವಿಸಿದ್ದು ತಕ್ಷಣ ಜಂಟಿ ಸಮೀಕ್ಷೆ ಕಾರ್ಯ ಪೂರ್ಣಗೊಳಿಸಿ ಪರಿಹಾರ ನೀಡುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ. ಹಾನಿಯಾಗುತ್ತಿದ್ದಂತೆ ಸಮರೋಪಾದಿಯಲ್ಲಿ ಸಮೀಕ್ಷೆ ನಡೆಸಿ ಮೊದಲ ಬಾರಿ 841.57 ಕೋಟಿ ರೂ. ಮತ್ತು ಎರಡನೇ ಬಾರಿ 1291 ಕೋಟಿ ರೂ.ಗಳ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಎರಡು ಬಾರಿಯೂ ಸಕಾಲಕ್ಕೆ ಕೇಂದ್ರ ತಂಡ ಆಗಮಿಸಿ, ವರದಿ ಸಲ್ಲಿಕೆ ಮಾಡಿತ್ತು. ಇದರ ಪರಿಣಾಮವಾಗಿ ಕೇವಲ ಒಂದೇ ತಿಂಗಳಲ್ಲಿ ನಮ್ಮ ಸರಕಾರ ರೈತರ ಖಾತೆಗಳಿಗೆ



ವಿದ್ಯಾಸಿರಿ ಬಿಡುಗಡೆಗೆ ಸಿದ್ಧ: ಸಿಎಂ

ರೈತರ ಮಕ್ಕಳಿಗಾಗಿ ರಾಜ್ಯದಲ್ಲಿ ವಿದ್ಯಾಸಿರಿ ಯೋಜನೆ ಜಾರಿಗೊಳಿಸಿದ ಮೇಲೆ 2 ಲಕ್ಷ 40 ಸಾವಿರ ಪಿಯುಸಿ ವಿದ್ಯಾರ್ಥಿಗಳಿಗೆ ನೆರವು ಬಿಡುಗಡೆಯಾಗಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು. ಅತಿವೃಷ್ಟಿ ಬೆಳೆಹಾನಿ ಚರ್ಚೆಯ ವೇಳೆ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಅವರ ಅನುಮಾನಕ್ಕೆ ಮುಖ್ಯಮಂತ್ರಿಗಳು ಸ್ಪಷ್ಟನೆ ನೀಡಿದರು. 1 ಸಾವಿರ ಕೋಟಿ ರೂ.ಘೋಷಿಸಿದ್ದು ನೆರವು ನೀಡಲು ವಿಳಂಬವಾಗಿರುವುದಕ್ಕೆ ಕೋವಿಡ್ ಕಾರಣ. ಪದವಿಗೆ ವಿದ್ಯಾರ್ಥಿಗಳ ಪ್ರವೇಶ ನಡೆದ ಹಿನ್ನೆಲೆಯಲ್ಲಿ ಅವರ ಅರ್ಜಿ ಸಲ್ಲಿಕೆಯ ಬಳಿಕ ವಿದ್ಯಾಸಿರಿ ಪಡೆದವರ ಪ್ರಮಾಣ ಹೆಚ್ಚಾಗಲಿದೆ ಎಂದರು.

ಪರಿಹಾರ ನೀಡಿ ದಾಖಲೆ ಬರೆದಿದೆ ಎಂದರು.

23,716 ಮನೆಗಳಿಗೆ ಹಾನಿಯಾಗಿದ್ದು 332.87 ಕೋಟಿ ರೂ.ಪರಿಹಾರ ನೀಡಲಾಗಿದೆ. ಸಂಪೂರ್ಣ ಮನೆ ಹಾನಿಯಾಗಿದ್ದರೆ, ಎನ್‌ಡಿಆರ್‌ಎಫ್‌ನಿಂದ 95,100 ರೂ., ರಾಜ್ಯ ಸರಕಾರದಿಂದ 4 ಲಕ್ಷ 49 ಸಾವಿರ ರೂ.ಸೇರಿ 5 ಲಕ್ಷ ರೂ. ಕೊಡಲಾಗುತ್ತಿದೆ. ಪ್ರವಾಹದಲ್ಲಿ ಮನೆಗಳು ಮುಳುಗಿ ನಷ್ಟಕ್ಕೆ ಒಳಗಾದ ತುರ್ತು ಪರಿಹಾರವಾಗಿ 10 ಸಾವಿರ ರೂ.ನೆರವು ನೀಡಲಾಗಿದೆ. ತೀವ್ರ ಹಾನಿಗೀಡಾದ ಮನೆಗಳಿಗೆ 3 ಲಕ್ಷ ರೂ. ಹಾಗೂ ಭಾಗಶಃ ಹಾನಿಗೀಡಾದ ಮನೆಗಳಿಗೆ 50 ಸಾವಿರ ರೂ.ಪರಿಹಾರ ಕೊಡಲಾಗುತ್ತಿದೆ ಎಂದರು.

22-12-2021 Uv Pg 07

ವಿದ್ಯುತ್ ಸಂಪರ್ಕ ಇಲ್ಲದ ಮನೆಗಳಿಗೆ ಈ ಯೋಜನೆ ಮೂಲಕ ವಿದ್ಯುತ್ ಸೌಲಭ್ಯ

ರೈತರು-ಬಡವರಿಗಾಗಿ 'ಬೆಳಕು' ಯೋಜನೆಗೆ ಚಾಲನೆ

ಬೆಳಗಾವಿ: ರೈತರು ಹಾಗೂ ಬಡ ಕುಟುಂಬಗಳಿಗೆ 'ಬೆಳಕು' ಯೋಜನೆ ಜಾರಿಗೆ ತರಲಾಗಿದ್ದು, ಈ ಯೋಜನೆ ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗಲಿದೆ. ಗುರುತಿನ ಚೀಟಿ ಹೊಂದಿದ ತೋಟ ಪಟ್ಟಿ ಮನೆಗಳು, ಹೊರವಲಯದ ಮನೆಗಳು, ಹಾಗೂ ವಿದ್ಯುತ್ ಸಂಪರ್ಕ ಇಲ್ಲದ ಪ್ರತಿ ಮನೆಗಳಿಗೆ ಬೆಳಕು ಯೋಜನೆ ಮೂಲಕ ವಿದ್ಯುತ್ ಸಂಪರ್ಕ ಒದಗಿಸಲಾಗುವುದು ಎಂದು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕಿತ್ತೂರು ತಾಲೂಕಿನ ದಾಸ್ತಿಕೊಪ್ಪ ಗ್ರಾಮದಲ್ಲಿ ಮಂಗಳವಾರ ಇಂಧನ ಇಲಾಖೆಯ 'ಬೆಳಕು' ಯೋಜನೆಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯುತ್ ಸಂಪರ್ಕ ಇಲ್ಲದ ಮನೆಗಳಿಗೆ ಈ ಯೋಜನೆ ಮೂಲಕ ವಿದ್ಯುತ್ ಸೌಲಭ್ಯ ಒದಗಿಸಲಾಗುವುದು. ಇಂಧನ ಇಲಾಖೆಯ ವಾಹನಗಳ ಮೂಲಕ ರೈತರಿಗೆ ಟಿಸಿ ಒದಗಿಸಲಾಗುವುದು ಎಂದರು.

ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ವಿದ್ಯುತ್ ಇಲಾಖೆ ನೆರವಾಗಿದೆ. ಸಮರ್ಪಕ ವಿದ್ಯುತ್‌ಗಾಗಿ ರೈತರಿಗೆ ದಿನವೂ ಅಲೆದಾಡುವ



ಕಿತ್ತೂರು ತಾಲೂಕಿನ ದಾಸ್ತಿಕೊಪ್ಪ ಗ್ರಾಮದಲ್ಲಿ ಮಂಗಳವಾರ 'ಬೆಳಕು' ಯೋಜನೆ ಉದ್ಘಾಟಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಫಲಾನುಭವಿಗಳಿಗೆ ಯೋಜನೆಯ ಪತ್ರ ವಿತರಿಸಿದರು.

ಪರಿಸ್ಥಿತಿ ಎದುರಾಗಿದ್ದು, ಈ ವ್ಯವಸ್ಥೆತೆಗೆದು ಹಾಕಲು 'ಬೆಳಕು' ಯೋಜನೆ ಜಾರಿಗೆ ತರಲಾಗಿದೆ. ಕೃಷಿ ಪಂಪ್‌ಸೆಟ್, ರೈತರ ಮನೆಗಳಿಗೆ ವಿದ್ಯುತ್, ಬಡವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ವಿದ್ಯುತ್ ಸೌಲಭ್ಯ ಒದಗಿಸಲಾಗುವುದು ಎಂದು ಹೇಳಿದರು.

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲಕುಮಾರ ಮಾತನಾಡಿ, ರಾಜ್ಯದಲ್ಲಿ ವಿದ್ಯುತ್ ರಹಿತ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಸರ್ಕಾರದ ಮಹತ್ವಾಕಾಂಕ್ಷೆಯ 'ಬೆಳಕು' ಯೋಜನೆ ಇದಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮನೆ ನಿರ್ಮಿಸುವವರು ಗ್ರಾ.ಪಂ. ಗಳಲ್ಲಿ ನಿರಪೇಕ್ಷಣಾ ಪತ್ರ ಪಡೆಯದೇ ವಿದ್ಯುತ್ ಸಂಪರ್ಕ ಒದಗಿಸುವಂತಹ ಮಹತ್ತರ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ ಎಂದರು.

ತೋಟದ ಮನೆಗಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸುವ ಬೇಡಿಕೆಗೆ ಅನುಗುಣವಾಗಿ ಹೆಸ್ಕಾಂ ವತಿಯಿಂದ ಈಗಾಗಲೇ ಸಮೀಕ್ಷಾ ಕಾರ್ಯ ಕೈಗೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ತೋಟದ ಮನೆಗಳಿಗೂ ಸಮರ್ಪಕ ವಿದ್ಯುತ್ ವಿತರಣೆಗೆ ಆಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಮಾತನಾಡಿ, ಉತ್ತರ ಕರ್ನಾಟಕ ಭಾಗದಲ್ಲಿ ವ್ಯವಸ್ಥೆ ತುಂಬಾ ಹಿಂದುಳಿದಿದ್ದು, 25 ಕೆ.ವಿ. ವಿದ್ಯುತ್ ಪರಿವರ್ತಕಗಳನ್ನು ಆಳವಡಿಸುವುದರ ಜೊತೆಗೆ ರೈತರ ಅನುಕೂಲಕ್ಕಾಗಿ ದಿನದ 24 ಗಂಟೆಯೂ ನಿರಂತರ ತ್ರಿಫೇಸ್ ವಿದ್ಯುತ್ ಪೂರೈಸುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು. ಕಿತ್ತೂರು ಶಾಸಕ ಮಹಾಂತೇಶ ದೊಡ್ಡಗೌಡರ ಅಧ್ಯಕ್ಷತೆ ವಹಿಸಿದ್ದರು.

ಸಿಎಂ ಬಸವರಾಜ ಬೊಮ್ಮಾಯಿ ಅವರು ದಾಸ್ತಿಕೊಪ್ಪ ಗ್ರಾಮದ ಭಾಯವ್ವ ಶಿದ್ರಾಮನಿ ಅವರ ಮನೆಯಲ್ಲಿ ವಿದ್ಯುತ್ ಗುಂಡಿ ಒತ್ತುವ ಮೂಲಕ ಯೋಜನೆಗೆ ಚಾಲನೆ ನೀಡಿ ಫಲಾನುಭವಿಗಳಿಗೆ ಪತ್ರ ವಿತರಿಸಿದರು.

22-12-2021 Uv Pg 04

ಶಂಕರಪುರ ಮಲ್ಲಿಗೆ ಗರಿಷ್ಠ ದರ ದಾಖಲೆ

ಉಡುಪಿ: ಶಂಕರಪುರ ಮಲ್ಲಿಗೆ ಹೂವಿನ ಗರಿಷ್ಠ ದರ 1,250ರೂ. ಗಳಿಂದ 2,100ರೂ. ಗಳಿಗೆ ಏರಲಿದ್ದು, ಕಮಿಷನ್ ಸಹಿತ ಪರಿಷ್ಕೃತ ದರ ಡಿ. 23ರಿಂದ ಜಾರಿಗೆ ಬರಲಿದೆ.

ಶಂಕರಪುರ ಮಲ್ಲಿಗೆ ಅಟ್ಟಿಗೆ ನಾಲ್ಕು ವರ್ಷಗಳ ಹಿಂದಿದ್ದ ಗರಿಷ್ಠ 820ರೂ. ದರವನ್ನು 1,250ರೂ. ಗಳಿಗೆ ಏರಿಸಲಾಗಿತ್ತು. ಮಲ್ಲಿಗೆ ದರ ನಿಗದಿ ಮಾಡುವ ಶಂಕರಪುರ ಕಟ್ಟೆಯ ಕಮಿಷನ್ 20ರಿಂದ 50ರೂ. ಗಳಿದ್ದರೆ ಇನ್ನು ಮುಂದೆ 20ರಿಂದ 100ರೂ. ಕಮಿಷನ್ ಸಿಗಲಿದೆ. ಮಲ್ಲಿಗೆ ಬೆಳೆಗಾರರಿಗೂ ಹೆಚ್ಚಿನ ದರದ ಲಾಭ ಸಿಗಲಿದೆ.

ಮಲ್ಲಿಗೆ ಕೃಷಿಯ ಖರ್ಚು ವೆಚ್ಚ ಹೆಚ್ಚಳದ ಹಿನ್ನೆಲೆಯಲ್ಲಿ ಶಂಕರಪುರ ಮಲ್ಲಿಗೆ ದರ ಪರಿಷ್ಕರಣೆ ಕೃಷಿಕರ ಬಹುದಿನದ ಬೇಡಿಕೆಯಾಗಿತ್ತು. ಈ ಬಾರಿ ನಿರಂತರ ಮಳೆಯಿಂದಾಗಿ ರೋಗಬಾಧೆಯಿಂದ ಗಿಡಗಳು ಬಳಲಿ, ಸೊರಗಿ ಮಲ್ಲಿಗೆ ಇಳುವರಿ ಕಡಿಮೆಯಾಗಿದೆ. ಬೇಡಿಕೆ ಪೂರೈಸಲು ಸಾಧ್ಯವಾಗದಂತಾಗಿದೆ. ಅಕಾಲಿಕ ಮಳೆ, ಹವಾಮಾನ ವೈಪರೀತ್ಯದಿಂದ ಶೇ. 15ರಿಂದ 25ರಷ್ಟು ಬೆಳೆ ನಾಶವಾಗಿದೆ. ಮಲ್ಲಿಗೆ ಸಾಗಾಟದ ಖರ್ಚು ಕೂಡ ಏರಿಕೆಯಾಗಿದ್ದು, ಶಂಕರಪುರದ ಮಲ್ಲಿಗೆ ದರ ನಿಗದಿ ಕೇಂದ್ರದ ಸಭೆಯಲ್ಲಿ ಮಲ್ಲಿಗೆ ಬೆಳೆಗಾರರು ಹಾಗೂ ಮಾರಾಟಗಾರರ ಹಿತದೃಷ್ಟಿಯಿಂದ ಕೆಲ ನಿರ್ಣಯ ಕೈಗೊಳ್ಳಲಾಗಿದೆ. ಚೌತಿ, ದೀಪಾವಳಿ ಹೊರತಾಗಿ ಕಳೆದ 17 ದಿನಗಳಿಂದ ಶಂಕರಪುರ ಮಲ್ಲಿಗೆ ಅಟ್ಟಿಗೆ 1,250ರೂ. ದರವಿದೆ.

22-12-2021 Vk Pg 05